ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ಆರು ದಿವಸದ ಒಳಗಾಗಿ ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಲು ಮೀಟಿಂಗ್ ಇಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಬೇಕಾದರೆ ಮೀಟಿಂಗ್ ಕರೆಯಲಿ ಅಥವಾ ಸ್ಟೇಟ್‌ಮೆಂಟ್ ಮಾಡಲಿ. ಏತಕ್ಕೆಂದರೆ ಜನರಿಗೆ ಅದು ಗೊತ್ತಾಗಬೇಕಲ್ಲಾ.

ಶ್ರೀ ಆರ್. ಎನ್. ನಾಯಕ್ : ಮಾನ್ಯ ರೈರವರೇ; ಏನು ಹೇಳುತ್ತೀರೋ ಹೇಳಿ; ತಾವು ಏನು ಸ್ಟೇಟ್‌ಮೆಂಟ್ ಮಾಡುತ್ತೀರೋ ಮಾಡಿ. ತಾವು ಇದ್ದೀರಲ್ಲಾ, ತಾವು ಏನು ಮಾಡುತ್ತಿದ್ದೀರಿ? ನೀವು ಹೋಗಿಬಂದಿರಲ್ಲಾ; ಅಲ್ಲಿಯ ಜನರು ಸಾಯುತ್ತಿದ್ದಾರೆ, ನೀವು ಏನು ಕೆಲಸ ಮಾಡುತ್ತಿದ್ದೀರಿ, ಅದನ್ನು ಹೇಳಿ? ನೀವು ಏತಕ್ಕೆ ಸುಮ್ಮನೆ ಕುಳಿತಿದ್ದೀರಿ, ರಾಜಿನಾಮೆಯನ್ನು ಕೊಡಿ; ಕೊಡಿ ರಾಜಿನಾಮೆ, ಸುಮ್ಮನೆ ಮಧ್ಯೆ ಮಾತನಾಡುತ್ತೀರಲ್ಲಾ.

ಅಧ್ಯಕ್ಷರು : ಮಾನ್ಯ ಆರ್. ಎನ್. ನಾಯಕರೇ, ತಾವು ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ : ನಾವು ಸಹ ಹೋಗಿದ್ದೆವು.

ಶ್ರೀ ಆರ್. ಎನ್. ನಾಯಕ್: ಮಾನ್ಯ ಸಗೀರ್ ಅಹಮದ್‌ರವರು ಹೋಗಿಬಂದರಂತೆ. ಸಗೀರ್ ಅಹಮದ್‌ರವರು ಅಲ್ಲಿಗೆ ಹೋಗಿ ಶಾಂತಿ ಸ್ಥಾಪನೆ ಮಾಡಲು ಪ್ರಯತ್ನ ಮಾಡಿದರು. ಅವರು ಮಾಡಿದ್ದೇನೆಂದರೆ ಅಲ್ಲಿಯ ಶಾಸಕರು ತಾವು ಹೋದಾಗ ಬರಲಿಲ್ಲ. ಸಗೀರ್ ಅಹಮದ್‌ರವರು ಯಾರೆನ್ನುವುದು ನನಗೆ ಗೊತ್ತಿಲ್ಲ. ಅವರು ಮಂತ್ರಿಯಾದುದು ನನಗೆ ಏನೂ ಗೊತ್ತಿಲ್ಲ. ಸಗೀರ್ ಅಹಮದ್‌ರವರು ಯಾರು ಎನ್ನುವುದು ನನಗೆ ಏನೂ ಗೊತ್ತಿಲ್ಲ. ಅವರು ನನಗೆ ನೋಟಿಸ್ ಕೊಟ್ಟಿದ್ದು ಗೊತ್ತಿಲ್ಲ. ಅವರು ಬಂದಾಗ ನೋಟಿಸ್ ಕೊಟ್ಟಿದ್ದರೆ ನಾನು ಸಹ ಬರುತ್ತಿದ್ದೆ.

ಅಧ್ಯಕ್ಷರು : ಮಾನ್ಯ ಆರ್. ಎನ್. ನಾಯಕರೇ, ನಾನು ಹೇಳುವ ಮಾತನ್ನು ಸ್ವಲ್ಪ ಕೇಳಿ. ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ : ಮಾನ್ಯ ಅಧ್ಯಕ್ಷರೇ, ನಾವು ಜವಾಬ್ದಾರಿಯುತವಾಗಿ ಇಲ್ಲಿಂದ ಅಲ್ಲಿಯತನಕ ಹೋಗಿ ಎರಡೆರಡು ಸಾರಿ ಮೂರು ಸಾರಿ ಹೋಗಿ ನಮಗೆ ಎಷ್ಟು ಸಾಧ್ಯವಿದೆ ಅಷ್ಟೂ ಮಾಡಿದ್ದೇವೆ.

(ಗೊಂದಲ)

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಬಹುಶಃ ಇವತ್ತಿನ ಕಾರ್ಯಕ್ರಮದ ಪಟ್ಟಿಯನ್ನು ನೋಡಿದಾಗ ಇವತ್ತಿಗೆ ಅಸೆಂಬ್ಲಿ ಮುಗಿಯುತ್ತದೆಂದು ನನಗೆ ಕಾಣಿಸುತ್ತದೆ. ಇವತ್ತೇ ಕೊನೆಯ ದಿವಸ. ಆರು ಜಿಲ್ಲೆಗಳಿಗೆ ಬರಗಾಲ ಬಂದಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದರು ಅದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ನಾವೂ ಕೂಡಾ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ವಿಷಯದ ಬಗ್ಗೆ ಮಾತನಾಡುತ್ತೇವೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವುದು ಸರಿ, ಸರ್ಕಾರ ಗಮನಹರಿಸಿ ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕು. ಅಲ್ಲಿಯ ಪೋಲೀಸ್‌ನವರು ಏನೂ ಕೆಲಸ ಮಾಡುತ್ತಿಲ್ಲ.

**ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ ರಚಿಸುವ ಬಗ್ಗೆ**

ಶ್ರೀ ಎಂ. ವಿ ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಕೊನೆಯ ದಿವಸ ಎಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ಡಿವಿಜನ್ನಿನ ಶಾಸನಸಭಾ ಸದಸ್ಯರು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಕರೆದಾಗ ಮೈದಾನ ಪ್ರದೇಶ ಅಭಿವೃದ್ಧಿ

ಮಂಡಲಿ ರಚನೆಯ ಬಗ್ಗೆ ಆರ್ಡಿನೆನ್ಸ್ ಹೊರಡಿಸುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ಆರ್ಡಿನೆನ್ಸ್ ಬರಲಿಲ್ಲ. ಈಗ ಶಾಸನಸಭೆ ಸೇರಿದೆ. ಆದರ ಬಗ್ಗೆ ಬಿಲ್ ಆಗಲಿ, ಪ್ರಿಂಟ್ ಆಗಿರುವುದಾಗಲಿ ಏನೂ ಇಲ್ಲ. ಈ ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ 6 ಜಿಲ್ಲೆಗಳಿಗೆ ಸಂಬಂಧಪಟ್ಟದ್ದು; ಬರಗಾಲಪೀಡಿತ ಜಿಲ್ಲೆಗಳಿಗೆ ಸಂಬಂಧಪಟ್ಟದ್ದು. ಸರ್ಕಾರದಿಂದ ಆಶ್ವಾಸನೆ ಬೇಕು. ಇವತ್ತು ಸದನ ಮುಗಿದ ಮೇಲೆ ಮುಂದಿನ ಸೆಕ್ಷನ್ನಲ್ಲಾದರೂ ಮೈದಾನ ಪ್ರದೇಶಾಭಿವೃದ್ಧಿ ಮಂಡಲಿಯ ಮಸೂದೆಯನ್ನು ತರುತ್ತೀರಾ ಅಥವಾ ಇಲ್ಲವೇ ಎಂಬ ಬಗ್ಗೆ ಸರ್ಕಾರದಿಂದ ಆಶ್ವಾಸನೆ ಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಬೀದರ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ತಮಗೆ ಒಂದು ಪತ್ರವನ್ನು ಕಳುಹಿಸಿದ್ದೆ.

ಅಧ್ಯಕ್ಷರು : ತಮ್ಮ ಪತ್ರ ಬಂದಿದೆ. ನಿನ್ನೆ ನಾನು ಸರ್ಕಾರಕ್ಕೆ ಅದನ್ನು ಕಳುಹಿಸಿ ಕೊಟ್ಟಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ (ಯೋಜನಾ ರಾಜ್ಯ ಸಚಿವರು) : ಮಾನ್ಯ ಸದಸ್ಯರು ಹೇಳಿರತಕ್ಕದ್ದು ಬಹಳ ಗಂಭೀರವಾಗಿರತಕ್ಕದ್ದು. ಮುಖ್ಯಮಂತ್ರಿಗಳು ಅದರ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಆ ಬಗ್ಗೆ ಈ ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ : ಕಾರ್ಯಕ್ರಮ ಅಲ್ಲ. ಮುಂದಿನ ಸೆಕ್ಷನ್ನಲ್ಲಿ ತರಬೇಕು.

ಶ್ರೀ ಟಿ.ಎಂ. ಮಂಜುನಾಥ್ : ಮುಂದಿನ ಸೆಕ್ಷನ್ನಲ್ಲಿ ಬಿಲ್ಲನ್ನು ತರುತ್ತೇವೆ.

ಶ್ರೀ ಮನೋಹರ್ ಐನಾಪುರ : ನನ್ನ ಕ್ಷೇತ್ರದ ಇಂಡಿ ತಾಲ್ಲೂಕಿನಲ್ಲಿ....

ಅಧ್ಯಕ್ಷರು : ತಾವು ಬರೆದು ಕಳುಹಿಸಿ, ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಮನೋಹರ್ ಐನಾಪುರ್ : ಹೇಳಿಕೆ ನೀಡಬೇಕು.

ಅಧ್ಯಕ್ಷರು : ಈಗ ಹೇಳಿಕೆ ನೀಡುವುದಕ್ಕೆ ಅವಕಾಶ ಇಲ್ಲ. ಕುಳಿತುಕೊಳ್ಳಿ.

## ಅವಿಶ್ವಾಸ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮೊಯ್ಲಿಯವರ ಸರ್ಕಾರದ ಮೇಲೆ ಅವರು ಇರತಕ್ಕ ಪಕ್ಷದ ಮೇಲೆ ಎಲ್ಲ ವಿರೋಧ ಪಕ್ಷಗಳವರು ಒಮ್ಮತದಿಂದ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೆ. ಈ ಅವಿಶ್ವಾಸ ನಿರ್ಣಯದ ಮೇಲೆ ಸಮಗ್ರ ಚಿಂತನೆ ಆಗಬೇಕಾಗಿದೆ ಹಾಗೂ ಸಮಗ್ರವಾಗಿ ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದು,. ಕಾರ್ಯಕಲಾಪ ನಡೆಯುವಾಗ ಆ ಕಡೆ ಈ ಕಡೆ ಓಡಾಡುವುದಕ್ಕೆ ನಾನು ಬೇಡ ಅನ್ನುವುದಿಲ್ಲ. ಮಾತುಗಳನ್ನು ಏನು ಆಡುತ್ತೀರಿ ಅದಕ್ಕೆ ಅಭ್ಯಂತರವಿಲ್ಲ. ಆದರೆ ತಾವು ಮಾತನಾಡಿದ ಧ್ವನಿ ತರಂಗಗಳು ನನ್ನವರೆಗೆ ಮುಟ್ಟಬಾರದು. ಕಿವಿಯಲ್ಲಿ ಮಾತನಾಡಿಕೊಳ್ಳಿ. ಕಲಾಪಕ್ಕೆ ತೊಂದರೆ ಆಗಬಾರದೆಂದು ಕೇಳಿಕೊಳ್ಳುತ್ತೇನೆ. ಬಹಳ ಜಾಸ್ತಿ ಚರ್ಚೆ ಮಾಡಬೇಕಾದರೆ ಲಾಬಿಯಲ್ಲಿ ಕುಳಿತು ಮಾಡನಾಡಬಹುದು. ಕಲಾಪ ಸರಿಯಾಗಿ ಎಲ್ಲರಿಗೆ ಕೇಳುವ ಹಾಗೆ ನಡೆಯುವ ಹಾಗೆ ಆಸ್ಪದ ಮಾಡಿಕೊಡುತ್ತೀರೆಂದು ವಿಶ್ವಾಸ ಹೊಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಅವಿಶ್ವಾಸ ನಿರ್ಣಯದ ಚರ್ಚೆಗೆ ತಾವು ಸಂಪೂರ್ಣ ಅವಕಾಶವನ್ನು ಕೊಡುವ ಭರವಸೆಯನ್ನು ನೀಡಿದ್ದೀರಿ. ಇದರಲ್ಲಿ ಎಲ್ಲಾ ಸದಸ್ಯರು ಸಮಗ್ರವಾಗಿ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ಈಗಾಗಲೇ ತಾವು